ಸಂಚಿಕೆ ಲ
ಆಗಸ್ಟ್ 2018

# ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



ಸಂಚಿಕೆ ೮
ಆಗಸ್ಟ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

ಈ ಸಂಚಿಕೆಯಲ್ಲಿ ...

ಸಂಪಾದಕೀಯ - ಪುಟ ೧
ಪೋಷಕರ ಅಂಕಣ - ಪುಟ ೨
ಹಬ್ಬ ಪುಟ - ೩
ಅ ಆ ಅಡ್ವೆಂಚರ್- ಪುಟ ೪
ಸಂದರ್ಶನ - ಪುಟ ೫ -೬
ಪ್ರವಾಸ - ಪುಟ ೭
ಚೆಣ್ಣರ ಚಿತ್ರ ಕಲೆ - ಪುಟ ೮
ನಾ ಓದಿದ ಕಥೆ - ಪುಟ ೯
ನಾ ಕಂಡ ಸಿನಿಮಾ - ಪುಟ ೧೦
ಪದ ಹುಡುಕೋಣ ಪುಟ - ೧೧
ಓದುಗರ ವಿಮರ್ಶೆ - ಪುಟ ೧೨
ಪತ್ರ ಮಾಲೆ – ಮೂರ್ತಿ ತಾತ - ಪುಟ ೧೩-೧೪

## ಸಂಪಾದಕೀಯ: ರಜನೀ ಮಹೇಶ್





ಅನುಭವವು ಸವಿಯಲ್ಲ, ಅದರ ನೆನಪೇ ಸವಿಯು ಎಂಬ ಮಾತಿದೆ. ಕಳೆದು ಹೋದ ದಿನಗಳು, ಅದರ ಅನುಭವವನ್ನು ಮೆಲುಕು ಹಾಕುವಾಗ ಸಿಗುವ ಆನಂದ ಅಷ್ಟಿಷ್ಟಲ್ಲ.

ಬಾಲ್ಯದ ಶಾಲೆಯ ನೆನಪುಗಳನ್ನು ಎಂದಿಗೂ ಮರೆಯಲಾಗುವುದಿಲ್ಲ. ಗೆಳೆಯರು, ಗೆಳತಿಯರು, ಜಗಳ, ದೋಸ್ತಿ ಬಿಡುವುದು, ಮತ್ತೆ ಒಂದಾಗೋದು, ಕಡ್ಡಿ (ಬಳಪ) ಗಳನ್ನು ಹುರಿದ ಹುಣಸೆ ಬೀಜ, ಬುಗರಿ ಹಣ್ಣು, ಸೂರಿ ಹಣ್ಣುಗಳಿಗೆ ವಿನಿಮಯಕ್ಕಾಗಿ ಬಳಸುವುದು. ಶಾಲೆಯ ಅಧ್ಯಾಪಕರು, ಹೆಡ್ ಮಾಸ್ಟ್ರು, ಅವರ ನಾಗರ ಬೆತ್ತ, ಅವರು ಪಾಠ ಮಾಡಿದ "ಧರಣಿ ಮಂಡಲ" ಹಾಡು.... ಹೀಗೆ ಹಲವಾರು ಚಿತ್ರಗಳು ಕಣ್ಣೆದುರು ಬಂದು ಹೋಗುತ್ತವೆ.


"ದ.ಕ. ಹಿ.ಪ್ರಾ. ಶಾಲೆ ಕೋಟ", ಕೋಟದ ಶಾಲೆಯೆಂದೇ ಕರೆಯಲ್ಪಡುವ ನನ್ನ ಪ್ರಾಥಮಿಕ ಶಾಲೆ ರಾಷ್ಟ್ರೀಯ ಹೆದ್ದಾರಿ ಯ ಪಕ್ಕದಲ್ಲಿದೆ. ಎರಡು ಕಟ್ಟಡಗಳು, 5 ತರಗತಿಗಳು, ಹೆಡ್ ಮೇಸ್ಟ್ರು ಕೊಠಡಿ, ಸುತ್ತ ಜಗುಲಿ, ಆ ಜಗುಲಿಯ ಅಂಚೆ ಪೆಟ್ಟಿಗೆ, ಸಣ್ಣ ಆಟದ ಮೈದಾನ, ಕೋ ಕೋ ಕೋರ್ಟ್, ಎದುರು ಇರುವ ಅಶೋಕ ವೃಕ್ಷದ ಸಾಲುಗಳು, ಧ್ವಜ ಸ್ತಂಭ, ಶಾಲೆಯ ಹಿಂದಿನ ಗಂಗಮ್ಮನ ಮನೆ, ಅವರ ಮಾವಿನ ಮರ ಇವೆಲ್ಲಾ ನನ್ನ ಶಾಲೆಯ ಒಂದು ಸುಂದರ ಚಿತ್ರಣ.

ಕನ್ನಡ ವರ್ಣಮಾಲೆಯಿಂದ ಹಿಡಿದು , ಅಂಕೆಗಳು, ಲೆಕ್ಕ, ಮಗ್ಗಿ , ಸಮಾಜ, ವಿಜ್ಞಾನ ಮತ್ತು ಆಂಗ್ಲ ವರ್ಣಮಾಲೆಯನ್ನು ಕಲಿಸಿದ ಶಾಲೆ ಅದು. ಆಟ, ಪಾಠದ ಜೊತೆಗೆ ಭಾಷಣ, ನೃತ್ಯ, ಸಂಗೀತ, ಪ್ರಬಂಧ, ಸ್ಮರಣ ಶಕ್ತಿ ಸ್ಪರ್ಧೆ, ನಾಟಕ ಮೊದಲಾದ ಪಠ್ಯೇತರ ಚಟುವಟಿಕೆಗಳಿಗೆ ನಾಂದಿ ಹಾಡಿದ ಶಾಲೆ ಇದು. ನನಗೆ ಮೊದಲ ಬಾರಿಗೆ ಗ್ರಂಥಾಲಯವನ್ನು ಪರಿಚಯಿಸಿದ ಶಾಲೆ. ನಾವೇ ನಿಂತು ಬಾಲ ಸಭೆ ನಡೆಸಿದ್ದು ಇಲ್ಲಿಯೇ ಮೊದಲು.

ಈ ಶಾಲೆಯೊಂದಿಗೆ, ಇದೆಲ್ಲದರ ಜೊತೆಗೆ ನನಗೆ ಇನ್ನೂ ಒಂದು ಆತ್ಮೀಯವಾದ ಸಂಬಂಧವಿದೆ. ಆಗಲೇ ಹೇಳಿದಂತೆ ಶಾಲೆಯ ಜಗುಲಿಯ ಅಂಚೆಪೆಟ್ಟಿಗೆ. ಈ ಅಂಚೆಪೆಟ್ಟಿಗೆ ನನಗೂ, ಬೆಂಗಳೂರಿನಲ್ಲಿದ್ದ ನನ್ನ ತಂದೆಗೂ ಇದ್ದ ಒಂದೇ ಒಂದು ಸಂಪರ್ಕ ಮಾಧ್ಯಮ. ನಾನು ಏನೇ ಹೇಳಬೇಕಿದ್ದರೂ, ನನಗೆ ಏನಾದ್ರು ಬೇಕಿದ್ದರೂ, ನಾನು ಇದೇ ಅಂಚೆಪೆಟ್ಟಿಗೆಯ ಮೂಲಕ ಅಪ್ಪನಿಗೆ ಕಾಗದ ಬರೆದು ಹಾಕುತ್ತಿದ್ದೆ. ಅದಕ್ಕೆ ಪ್ರತಿಯಾಗಿ, ಬೇಕಾಗಿದ್ದನ್ನು ಅಪ್ಪ ರಾತ್ರಿ ಬಸ್ಸಿನಲ್ಲಿ ಕಳಿಸುತ್ತಿದ್ದರು. ಆಗಲೂ ಬೆಳಗ್ಗಿನ ಜಾವ ಇದೇ ಶಾಲೆಯ ಜಗುಲಿಯ ಮೇಲೆ ನಿಂತು ಬಸ್ಸಿಗಾಗಿ ಕಾಯುತ್ತಿದ್ದ ನೆನಪು ಇನ್ನು ಹಸಿಯಾಗಿಯೇ ಇದೆ. ಇಷ್ಟೆಲ್ಲಾ ಆಪ್ತವಾದ ಶಾಲೆ, ಶಾಲೆಯ ಜಗುಲಿ, ಅಂಚೆಪೆಟ್ಟಿಗೆ ಈಗ ಬರಿಯ ನೆನಪು ಮಾತ್ರ. ರಾಷ್ಟ್ರೀಯ ಹೆದ್ದಾರಿಯ ಅಗಲೀಕರಣದಿಂದ ಹಳೆಯ ಶಾಲೆ ಕಟ್ಟಡವನ್ನು ಕೆಡವಿ ಹೊಸ ಶಾಲೆಯನ್ನು ನಿರ್ಮಿಸಿದ್ದಾರೆ. ನನ್ನ ಶಾಲೆಯ ನೆನಪನ್ನು ಹಚ್ಚ ಹಸಿರಾಗಿಡಲು ಅದನ್ನು ಅಳಿಯುವ ಮುನ್ನ ಅದರ ಚಿತ್ರಪಟವನ್ನು ತೆಗೆದು ಕಳಿಸಿದ್ದಳು ನನ್ನ ತಂಗಿ. ಅವಳಿಗೆ ಧನ್ಯವಾದಗಳು.


ರಜನೀ


ಪ್ರಕೃತಿ


ಅದಿತ್


ಆರುಶ್


ಸಿಹಿ



ಹಚ್ಚೇವು ಕನ್ನಡದ ದೀಪ...

ಚಿಗುರು ಕನ್ನಡ ಪಾಠಶಾಲೆ –ಶಾರ್ಲೆಟ್
rajanisomayaji@gmail.com





ಪೋಷಕರ ಅಂಕಣ : ಪುನೀತಾ ಅನಿಲ್

## ಮೊಬೈಲ್ ಇರಲಿ ಮಕ್ಕಳ ಮನೋವಿಕಾಸಕ್ಕೆ

ಪುಟಾಣಿ ಬೆರಳುಗಳು ಮೊಬೈಲ್ ಹಿಡಿದು ಆಡುವುದು ಈಗ ಕಾಮನ್. ಅದ್ರಲ್ಲಿ ಆಟವಾಡುತ್ತಲೇ ಅವರ ಬುದ್ಧಿ, ಮನಸ್ಸುಗಳ ವಿಕಸನವೂ ಆಗುವಂತಿರಬೇಕು. “ಆಡು ಮುಟ್ಟದ ಸೊಪ್ಪಿಲ್ಲ, ಮೊಬೈಲ್ ಹಿಡಿಯದ ಮಗುವಿಲ್ಲ”. ಇದು ವೇಗದ ಯುಗವೂ ಹೌದು. ಯಾವುದೇ ಶುಭಸಮಾರಂಭಗಳಿಗೆ ಹೋದರೆ, ಮಕ್ಕಳು ಗುಂಪಾಗಿ ಕುಳಿತು ಕೊಂಡಿರುತ್ತಾರೆ .ಒಬ್ಬೊಬ್ಬರ ಕೈಲಿ ಒಂದೊಂದು ಮೊಬೈಲ್. ಜೊತೆಗೆ ಮೆಮೊರಿ ಕಾರ್ಡ್ ಬಳಸಿಯೋ, ಬ್ಲೂಟೂತ್ ಶೇರ್ ಇಟ್ ಮೂಲಕವೋ ಗೇಮ್ ಗಳನ್ನೂ ವಿನಿಮಯ ಮಾಡಿಕೊಳ್ಳುತ್ತಿರುವುದನ್ನು ನೋಡುತ್ತೇವೆ. “ ಈ ಮೊಬೈಲ್ ನಲ್ಲಿ ನನಗೆ ಗೊತ್ತಿಲ್ಲದಿರುವುದು ಮಗನಿಗೆ ಗೊತ್ತಿದೆ.” ಅಂತ ಹೇಳುವವರನ್ನು ಹೆಜ್ಜೆ ಹೆಜ್ಜೆಗೂ ಕಾಣುತ್ತೇವೆ. ಮಕ್ಕಳ ಮೊಬೈಲ್ ಗೀಳಿನ ಬಗ್ಗೆ ಹಲುಬುವವರನ್ನು ನೋಡುತ್ತಲೇ ಇರುತ್ತೇವೆ. ನಮ್ಮ ಮಕ್ಕಳನ್ನೇನೋ ಕಂಟ್ರೋಲ್ ಮಾಡಬಹುದು. ಬೇರೆಯವರ ಮಕ್ಕಳು ಆಡುವುದನ್ನು ನೋಡುವಾಗ ಮಗುವಿನ ಮನಸ್ಸು ಸುಮ್ಮನಿರುತ್ತದೆಯಾ? ಏನು ಮಾಡಬಹುದು?

ಮಕ್ಕಳ ಕೈಗೆ ಆ ಮೊಬೈಲ್ ಕೊಡುವಾಗ, ಆ ಮೊಬೈಲ್ ಮಕ್ಕಳ ಬೌದ್ಧಿಕ ವಿಕಸನಕ್ಕೆ ಕಾರಣವಾಗುವ ಆಟಗಳನ್ನು ಅಳವಡಿಸಿಯೇ ಕೊಡುವುದು ಸೂಕ್ತ. ಅವರಿಗಾಗಿಯೇ ಪ್ರತ್ಯೇಕ ಲಾಗಿನ್ ಪ್ರೊಫೈಲ್ ಇರುತ್ತದೆ. ಅದನ್ನು ಬಳಸಿ, ಡ್ರಾಯಿಂಗ್, ಪೇಂಟಿಂಗ್, ಗಣಿತ, ಒರಿಗಾಮಿ, ವೇದಗಣಿತ, ಇತ್ಯಾದಿಗಳಲ್ಲದೆ ತರ್ಕ ಶಕ್ತಿ ಹೆಚ್ಚಿಸಬಲ್ಲ ಚೆಸ್ ಗೇಮ್, ಪದಬಂಧ, ಮುಂತಾದ ಆಪ್ಗಳೇ ಇರಲಿ . ಜೊತೆಗೆ ಮೊಬೈಲ್ ನಲ್ಲೇ ಒಳ್ಳೆಯ ಪುಸ್ತಕಗಳ ಓದಿಗೂ ಪ್ರೇರೇಪಿಸಬಹುದು. ಗೂಗಲ್ ಅರ್ಥ ಆಪ್ ಮೂಲಕ ಜಗತ್ತಿನಲ್ಲಿರುವ ಸ್ಥಳಗಳು, ಪ್ರೇಕ್ಷಣೀಯ ಕೇಂದ್ರಗಳನ್ನು ನೋಡಬಹುದು. ಮನಸ್ಸು ಅರಳಿಸುವಂತಹ ಹಾಡುಗಳನ್ನು ಕೇಳುವಂತೆ ಪ್ರೋತ್ಸಾಹಿಸಬಹುದು.

**ಸ್ಕ್ರೀನ್ ನೋಡುವ ಅವಧಿ ಕಡಿತ:** ಮಕ್ಕಳ ಮೊಬೈಲ್ ಆಟದ ಅವಧಿ ನಿಗದಿಪಡಿಸಿ, ನಿರ್ಧಿಷ್ಟಪಡಿಸಿದ ಅವಧಿ ಕೊನೆಗೊಂಡಾಗ ತನ್ನಿಂತಾನೇ ಸ್ಕ್ರೀನ್ ಆಫ್ ಮಾಡುವ “ಪೇರೆಂಟಲ್ ಕಂಟ್ರೋಲ್ “ ಆಪ್ ಗಳು ಸಾಕಷ್ಟಿವೆ. ಉದಾಹರಣೆಗೆ, ಸ್ಕ್ರೀನ್ ಟೈಮ್ ಅಥವಾ ಕಿಡ್ಸ್ ಪ್ಲೇಸ್ ಎಂಬ ಆಪ್ ಇದೆ.

**ಕಣ್ಣುಗಳ ರಕ್ಷಣೆ** : ಸುಧೀರ್ಘ ಹೊತ್ತು ಮೊಬೈಲ್ ಸ್ಕ್ರೀನ್ ನೋಡುವುದರಿಂದ ಕಣ್ಣುಗಳಿಗೆ ಹಾನಿಯುಗುವುದರಿಂದಾಗಿಯೇ ಈಗಿನ ಮೊಬೈಲ್ ಫೋನ್ ಗಳಲ್ಲಿ “ಅಡಾಪಿಟ್ಟೀವ್ ಬ್ರೈಟನೆಸ್ “ ಎಂಬ ಡಿಸ್ ಪ್ಲೇ ಮೋಡ್ ಇರುತ್ತದೆ. ಅದನ್ನು ಎನೇಬಲ್ ಮಾಡಿಕೊಳ್ಳಬೇಕು.

**ನೀಲಕಿರಣ :** ಮೊಬೈಲ್ ಸ್ಕ್ರೀನ್ ನಿಂದ ಹೊರಬರುವ ನೀಲಕಿರಣಗಳು (ಬ್ಲೂ ರೇ) ನಿದ್ದೆ ಗೆ ಸಮಸ್ಯೆ ಉಂಟುಮಾಡುತ್ತದೆ. ಈ ನೀಲ ಕಿರಣಗಳಿಂದಾಗುವ ಅಪಾಯ ತಪ್ಪಿಸಲು ಕೂಡ ಸಾಕಷ್ಟು ಅಪ್ ಗಳಿವೆ. ಉದಾಹರಣೆಗೆ ಟ್ವಿಲೈಟ್ ಅಂಥವನ್ನು ಬಳಸಬಹುದು .

**ಇಂಟರ್ನೆಟ್ :** ಆದಷ್ಟು ಇಂಟರ್ನೆಟ್ ಆಧಾರಿತ ಗೇಮ್ ಗಳು ಬೇಡ. ಕೆಲವಂತೂ ಜೂಜಾಟಕ್ಕೆ ಪ್ರೇರಣೆ ನೀಡಬಲ್ಲದು.

**ಭಂಗಿ :** ಮೊಬೈಲ್ ಹಿಡಿದಿರುವಾಗ ಕುಳಿತುಕೊಳ್ಳುವ ಭಂಗಿಯೂ ದೈಹಿಕ ಬೆಳವಣಿಗೆಗೆ ಅಡ್ಡಿಯಾಗಬಹುದು .ಇದರ ಬಗ್ಗೆ ಕೂಡ ಗಮನ ಹರಿಸಿ.

ಮಕ್ಕಳು ಒಳ್ಳೆಯ ಮೊಬೈಲ್ ಗೇಮ್ ಆಡುವಂತೆ, ಮಕ್ಕಳ ಬೌದ್ಧಿಕ ಶಕ್ತಿ ಬೆಳೆಯಲು ಕಾರಣವಾಗ ಬಲ್ಲ ಯುಟ್ಯೂಬ್ ವೀಡಿಯೊಗಳನ್ನು ನೋಡುವಂತೆ ಪ್ರೋತ್ಸಾಹಿಸುತ್ತಲೇ, ದಿನಕ್ಕೆ ಒಂದು – ಒಂದೂವರೆ ಗಂಟೆ ಮಾತ್ರವೇ ಮೊಬೈಲ್ ಸ್ಕ್ರೀನ್ ಮೇಲೆ ಕಣ್ಣಿರಿಸುವಂತೆ ನೋಡಿಕೊಳ್ಳಿ. ಇಲ್ಲದಿದ್ದಲ್ಲಿ, ಮಕ್ಕಳಿಗೆ ನಿದ್ರಾ ಕೊರತೆ, ಕಣ್ಣುಗಳಿಗೆ ಹಾನಿ, ಚಿತ್ತ ಚಾಂಚಲ್ಯ ಹೆಚ್ಚಾಗುವ ಸಾಧ್ಯತೆಗಳು ಇರುತ್ತದೆ ಎಂಬುದು ವೈಜ್ಞಾನಿಕವಾಗಿ ದೃಢಪಟ್ಟಿರುವುದರಿಂದ ಇದು ಅಗತ್ಯ. ಎಲ್ಲರೂ ಮೊಬೈಲ್ ಉಪಯೋಗಿಸುತ್ತಿರುವಾಗ ಮಕ್ಕಳಿಗೆ ಬೇಡ್ವೆ ಬೇಡ ಅಂತ ನಿರ್ಬಂಧ ವಿಧಿಸುವುದು ಉಚಿತವಲ್ಲ. ಯಾಕೆಂದರೆ ಮೊಬೈಲ್ ಅಥವಾ ಯಾವುದೇ ಗ್ಯಾಜೆಟ್ ನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡ ಮಕ್ಕಳೇ ಮೊಬೈಲ್ ಆಟಗಳನ್ನು ರೂಪಿಸಿದ್ದಾರೆ. ಮೊಬೈಲ್ ಆಟವಾಡುತ್ತಲೇ ಗೇಮಿಂಗ್ ನಿಂದ ಕೋಡಿಂಗ್ ತಂತ್ರಜ್ಞಾನವನ್ನು ಕರಗತ ಮಾಡಿಕೊಂಡಿರುವ ಸಾಕಷ್ಟು ವರದಿಗಳನ್ನು ಓದಿದ್ದೇವೆ. ಇದೆಲ್ಲವೂ ತಂತ್ರಜ್ಞಾನದ ಸಕಾರಾತ್ಮಕ ಪರಿಣಾಮ.



## ಶ್ರೀ ವರಮಹಾಲಕ್ಷ್ಮಿ ವೃತ – ಅಭಿಜ್ಞಾ ನಾಗೇಶ್







ಆಷಾಡ ಮಾಸದ ಕೊನೆಯ ದಿನ ಭೀಮನ ಅಮಾವಾಸ್ಯೆ ಕಳೆಯುತ್ತಿದ್ದ ಹಾಗೆ ಶ್ರಾವಣ ಮಾಸ ಪ್ರಾರಂಭ. ಹಬ್ಬಗಳ ಸಾಲೇ ಸಾಲು. ಶ್ರಾವಣ ಮಾಸದ ಎರಡನೇ ಶುಕ್ರವಾರದಂದು ಬರುವ ವರಮಹಾಲಕ್ಷ್ಮಿ ವ್ರತವನ್ನು ಸಡಗರ ಸಂಭ್ರಮದಿಂದ ಆಚರಿಸುತ್ತಾರೆ. ಇದು ವಿವಾಹಿತ ಮಹಿಳೆಯರು ತಮ್ಮ ಕುಟುಂಬದ ಒಳಿತಿಗಾಗಿ ಶ್ರೀ ಲಕ್ಷ್ಮೀದೇವಿಯನ್ನು ಕೋರಿ ಶ್ರದ್ಧಾಭಕ್ತಿಗಳಿಂದ ಮಾಡುವ ವ್ರತ. ಈ ದಿನದಂದು ವರಮಹಾಲಕ್ಷ್ಮಿಯನ್ನು ಪೂಜಿಸಿದರೆ ಅಷ್ಟಲಕ್ಷ್ಮಿಯರನ್ನು ಪೂಜಿಸುವುದಕ್ಕೆ ಸಮ ಎಂಬ ನಂಬಿಕೆಯೂ ಇದೆ. ಈ ಪೂಜೆ, ವ್ರತವನ್ನು ಮಾಡುವವರು ಸಂಪೂರ್ಣವಾಗಿ ದೇವಿಯ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಹಿನ್ನೆಲೆ: ಸ್ಕಂದ ಪುರಾಣದಲ್ಲಿ ಈ ವ್ರತದ ಮಹತ್ವದ ಬಗ್ಗೆ ಉಲ್ಲೇಖವಿದೆ. ಎಲ್ಲಾ ನಾರೀಮಣಿಯರಿಗೂ ಪವಿತ್ರ ಮತ್ತು ವರಪ್ರಸಾದವಾದ ವರವನ್ನು ಶಿಫಾರಸು ಮಾಡಲು ಪಾರ್ವತಿ ದೇವಿಯು ಮಹಾಶಿವನಲ್ಲಿ ಕೇಳಿಕೊಳ್ಳುತ್ತಾಳೆ. ಆ ಸಂದರ್ಭದಲ್ಲಿ ಮಹಾಶಿವನು ವರಮಹಾಲಕ್ಷ್ಮಿ ವ್ರತದ ಬಗ್ಗೆ ಹೇಳಿತ್ತಾನೆ. ಚಾರುಮತಿ ಎಂಬ ಮಹಿಳೆಯು ತನ್ನ ದುರಾದೃಷ್ಟವನ್ನು ನೆನೆದು ಕಣ್ಣೀರು ಹಾಕುತ್ತಿರುತ್ತಾಳೆ. ಲಕ್ಷ್ಮೀದೇವಿಯ ಪರಮಭಕ್ತೆಯಾಗಿದ್ದ ಅವಳು ತನ್ನ ಕಷ್ಟವನ್ನು ನಿವಾರಿಸುವಂತೆ ದೇವಿಯನ್ನು ಬೇಡಿಕೊಳ್ಳುತ್ತಾಳೆ. ಆಗ ಲಕ್ಷ್ಮೀದೇವಿಯು ಆಕೆಯ ಕನಸ್ಸಿನಲ್ಲಿ ಬಂದು ವರಮಹಾಲಕ್ಷ್ಮಿ ವ್ರತವನ್ನು ಮಾಡಲು ತಿಳಿಸುತ್ತಾಳೆ. ಮರುದಿನ ಚಾರುಮತಿಯು ಬಂಧು ಬಾಂಧವರೊಂದಿಗೆ ವರಮಹಾಲಕ್ಷ್ಮಿ ವ್ರತವನ್ನು ಮಾಡಿದಳು. ನಂತರ ಅವಳ ಕಷ್ಟಗಳೆಲ್ಲ ದೂರವಾಗಿ ಸಕಲ ಸೌಭಾಗ್ಯಗಳು ಒದಗಿತು.




## ಅ ಆ ಅಡ್ವೆಂಚರ್: ಕೃಶಿತ್ ಗಾಜುಲ




## ರಂಗ್ ರಂಗ್ ರಂಗೋಲಿ





ಸಂಚಿಕೆ ೮
ಆಗಸ್ಟ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್




## ನನ್ನ ಆರ್ಟ್ ಟೀಚರ್ ಶ್ರೀ. ರವಿಕಿರಣ್ ಮಾಡುಗುಲ : ಪ್ರಕೃತಿ ಉಪಾಧ್ಯ

**ನನ್ನ ಬಗ್ಗೆ ಒಂದಿಷ್ಟು** : ನಾ ಹುಟ್ಟಿದ್ದು ಆಂಧ್ರಪ್ರದೇಶದ ವಿಜಯನಗರಂನಲ್ಲಿ. ಬೆಳೆದದ್ದು ಕರ್ನಾಟಕದ ಹಂಪಿಯಲ್ಲಿ .ನನ್ನ ಇಡೀ ಜೀವನ ತುಂಗಭದ್ರೆಯ ಪುಟ್ಟನಡುಗಡ್ಡೆ ವಿರುಪಾಪುರಗಡ್ಡಿಯಲ್ಲಿ ಕಳೆದಿದೆ. ರಾಶಿಬಿದ್ದ ಬೃಹತ್ ಬಂಡೆಗಳ ನಡುವೆ ಧುಮುಕುತ್ತಾ ಹಚ್ಚ ಹಸಿರು ಬತ್ತದಗದ್ದೆಗಳ ಬದಿಯಲ್ಲಿ ಪ್ರಶಾಂತಳಾಗಿ ಹರಿಯುತ್ತಿರುವ ತುಂಗಭದ್ರೆಯಗುಂಟ ನನ್ನ ಕನಸುಗಳು ಅರಳಿವೆ. ದಿನಾ ಶಾಲೆ ಕಾಲೇಜಿಗೆ ಹೋಗುವಾಗೆಲ್ಲ ಹೊಳೆದಾಟಿಯೇ ಹೋಗಬೇಕಿತ್ತು. ಅದೊಂದು ಅಪೂರ್ವ ಅನುಭವ. ಎತ್ತೆತ್ತರ ತೆಂಗಿನಮರಗಳು ವಿಚಿತ್ರಕಾರದ ಸುಂದರ ಬಂಡೆಗಳು ನಳ ನಳಿಸುವ ಗದ್ದೆಯ ಹಸಿರು ಹಾಳೆಗಳು ಹಾಳು ಹಂಪಿಯ ಆತೋನಾತ ಅವಶೇಷಗಳು ನನ್ನನ್ನೂ ಸೇರಿಸಿಕೊಂಡಂತೆ ಎಲ್ಲ ಕಲಾವಿದರ ಚಿರಂತನ ಸ್ಪೂರ್ತಿಯ ಸೆಲೆಯಾಗಿವೆ. ನಾ ಯಾವುದೆ ಕಲಾ ಕಾಲೇಜಿಗೆ ಹೋದವನಲ್ಲ. ಆದರೆ ಐರ್ಲ್ಯಾಂಡಿನ ಮಹಾನ್ ಕಲಾವಿದರಾದ ರಾಯ್ ಕೀಗನ್ ರಿಂದ ಚಿತ್ರಕಲೆಯ ಗುಟ್ಟನ್ನು ಅರಿತಿದ್ದೇನೆ . ಹಾಗೆಯೇ ರಾಬರ್ಟ್ ಗೀಸಿಂಕ್ ಮತ್ತು ರಾಬರ್ಟ್ ಟರ್ನ್ಬ ಬುಲ್ ರಿಂದಲೂ ಪ್ರೇರಣೆ ಪಡೆದಿದ್ದೇನೆ . ಆಗಿನಿಂದಲೂ ಕಲೆ ನನ್ನ ಬದುಕಿನ ಅವಿಭಾಜ್ಯ ಅಂಗವೇ ಆಗಿಹೋಗಿದೆ. ವಿವಿಧ ಭಾವಾಭಿವ್ಯಕ್ತಿಯ ಮುಖಗಳು ನನ್ನನ್ನು ಸದಾ ಆಕರ್ಷಿಸೋದರಿಂದ ನನಗೆ ಪೋರ್ಟ್ ರೇಯ್ಟ್ ( ಮುಖಭಾವ ಚಿತ್ರಣ ) ಪೇಂಯ್ಟಿಂಗ್ ಅಂದರೆ ತುಂಬ ಆಸಕ್ತಿ. ಹೆಚ್ಚಾಗಿ ಅದನ್ನೆ ಮಾಡ್ತೀನಿ . ಪೆನ್ಸಿಲ್ ಡ್ರಾಯಿಂಗ್ ನನಗೆ ಅಚ್ಚುಮೆಚ್ಚು. ಆದರೆ ಆಯಿಲ್ ಪೆಯಿಂಟಿಂಗ್ ಮತ್ತು ಆಕ್ರಿಲಿಕ್ ವರ್ಕ್ ಕೂಡ ಮಾಡ್ತೀನಿ.ಅಪರೂಪಕ್ಕೆ ಅಲ್ಪಾವಧಿ ಯೋಜನೆಗಳಿಗೆ ಮೃದುವಾದ ಪೇಸ್ಟ್ ಲ್ಸ್ ಕೂಡ ಬಳಸ್ತೀನಿ. ನಾನೇನು ಪ್ರೊಫೆಷನಲ್ ತರಬೇತಿ ಪಡೆದ ಕಲಾವಿದನಲ್ಲ. ಆದರೆ ಇವರು ಕಲಿಸಬಲ್ಲರು ಅಂತ ನಂಬುವವರಿಗೆ ನನಗೆ ತಿಳಿದಷ್ಟು ಹೇಳಿಕೊಡುತ್ತೇನೆ. ಯಾರಿಗಾದರೂ ಹೇಳಿಕೊಡುವ ಮುಂಚೆ ಸಾಕಷ್ಟು ಸಿದ್ಧತೆ ಮಾಡಿಕೊಂಡಿರ್ತೀನಿ. ಚಿತ್ರಕಲೆ ಕುರಿತ ನನ್ನ ತಿಳುವಳಿಕೇನ. ಹೆಚ್ಚಿಸ್ಕೊತಾನೆ ಇರ್ತೀನಿ. ಕಲಾತರಗತಿಗಳಲ್ಲಿ ಶಕ್ತಿಮೀರಿ ನನ್ನ ತಿಳುವಳಿಕೇನ ಧಾರೆಯರೀತೀನಿ.













**ನಾನು ಮತ್ತು ನನ್ನ ಆರ್ಟ್ ಟೀಚರ್ ಶ್ರೀ ರವಿಕಿರಣ್ ಮಾಡುಗುಲ ಅವರ ಸಂದರ್ಶನದ ಒಂದು ತುಣುಕು:**

**ಪ್ರಶ್ನೆ** : ನೀವು ಯಾವಾಗ ಚಿತ್ರ ಬಿಡಿಸೋಕೆ ಶುರು ಮಾಡಿದ್ರಿ?
**ಉತ್ತರ**: ೧-೩ ನೇ ತರಗತಿಯಲ್ಲಿ. ನಾನು ತುಂಬಾ ಚಿಕ್ಕವನಿದ್ದೆ, ನಿಮ್ಮ ಹಾಗೆ.
**ಪ್ರಶ್ನೆ:** ನೀವೇ ಡ್ರಾಯಿಂಗ್ ಕಲಿತಿರಾ ಅಥವಾ ನಿಮಗೆ ಗುರು ಇದ್ರಾ? ಗುರು ಯಾರು?
ಉತ್ತರ: ನನಗೆ ಗುರು ಇದ್ರು. ಅವರ ಹೆಸರು ರಾಯ್ ಕೀಗನ್. ಐರ್ಲೆಂಡ್ ಯಿಂದ ಹಂಪೆ ನೋಡಲು ಬಂದವರು ಅವರು. ಹಂಪೆಯ ಸ್ಮಾರಕಗಳು, ಕಲ್ಲುಬಂಡೆ ಗಳು, ವಾಸ್ತುಶಿಲ್ಪ... ಎಲ್ಲವೂ ಅವರನ್ನು ಹಂಪೆಯಲ್ಲೇ ನೆಲೆಯೂರುವಂತೆ ಮಾಡಿತು. ಅವರ ಹತ್ರ ಹೆಚ್ಚಿನದನ್ನು ಕಲಿತೆ. ಹಂಪೆಯ ಸೌಂದರ್ಯವನ್ನು ಬಿಡಿಸೋಕೆ ಬಹಳ ಜನ ಚಿತ್ರಕಾರರು ಬರುತ್ತಾರೆ, ಅವರ ಹತ್ರ ಕೂಡ ಕಲಿತಿದ್ದೇನೆ.
**ಪ್ರಶ್ನೆ:** ನೀವು ಯಾವ ಯಾವ ವಿಷಯದ ಬಗ್ಗೆ ಚಿತ್ರ ಬಿಡಿಸುತ್ತೀರಾ?
ಉತ್ತರ: faces, ಮುಖಗಳು .. ನನಗೆ ಮುಖಗಳ ( ಪೋರ್ಟ್ ರೇಯ್ಟ್ ) ಚಿತ್ರ ಬಿಡಿಸೋಕೆ ತುಂಬಾ ಇಷ್ಟ. ನಾನು ತುಂಬಾ ಆಳವಾಗಿ ಮತ್ತು ಡೀಟೇಲ್ ಆಗಿ ಮುಖಗಳನ್ನು ನೋಡುತ್ತೇನೆ ಮತ್ತು ಬಿಡಿಸುತ್ತೇನೆ. ಲ್ಯಾಂಡ್ಸ್ಕೇಪ್ ಕೂಡ ಬಿಡುಸುತ್ತೇನೆ.
**ಪ್ರಶ್ನೆ**: ಯಾವ ಮಾಧ್ಯಮದಲ್ಲಿ ಚಿತ್ರ ಬಿಡಿಸುತ್ತೀರಾ? ನಿಮಗೆ ಇಷ್ಟವಾದ ಮಾಧ್ಯಮ ಯಾವುದು?
**ಉತ್ತರ**: ಪೆನ್ಸಿಲ್, ಪೇಸ್ಟ್ ಲ್ಸ್ , ಆಯಿಲ್ ಪೆಯಿಂಟಿಂಗ್ ಮತ್ತು ಆಕ್ರಿಲಿಕ್ ವರ್ಕ್ ಹೀಗೆ ಎಲ್ಲ ಮಾಧ್ಯಮಗಳಲ್ಲೂ ಚಿತ್ರ ಬಿಡಿಸುತ್ತೇನೆ. ನನಗೆ ಇಷ್ಟವಾದ ಮಾಧ್ಯಮ ಪೆನ್ಸಿಲ್ ಸ್ಕೆಚ್.
**ಪ್ರಶ್ನೆ** : ನೀವು ಬಿಡಿಸಿದ ಚಿತ್ರಗಳಲ್ಲಿ ನಿಮಗೆ ಇಷ್ಟವಾದ ಪೆಯಿಂಟಿಂಗ್ ಯಾವುದು?
**ಉತ್ತರ**: ನಿನ್ನದೇ ... ಚಿತ್ರ.
**ಪ್ರಶ್ನೆ:** ನೀವು ಬಿಡಿಸಿದ ಚಿತ್ರಗಳನ್ನು ಮಾರಾಟಕ್ಕೆ ಇಡುತೀರಾ?
**ಉತ್ತರ**: ಇಲ್ಲಾ, ಪ್ರದರ್ಶನಕ್ಕೆ (exhibition) ಇಡುತ್ತೇನೆ. Art is more like my passion. ಹಾಗಾಗಿ ನನಗೆ ಮಾರಾಟ ಮಾಡಲು ಇಷ್ಟ ಇಲ್ಲ. ಐ ಜಸ್ಟ್ ಡು ಇಟ್ ಫಾರ್ ಮೈ ಸೆಲ್ಫ್.
**ಪ್ರಶ್ನೆ:** ನೀವು ನಿಮ್ಮ ಚಿತ್ರಗಳನ್ನೂ ಆರ್ಟ್ ಸ್ಪರ್ಧೆಗೆ ಕಳಿಸಿದ್ದೀರಾ?
ಉತ್ತರ: ಇಲ್ಲ.
**ಪ್ರಶ್ನೆ**: ನೀವು ಚಿತ್ರಕಲೆಯಲ್ಲಿ ಏನು ಸಾಧಿಸಬೇಕು ಅಂತ ಅಂದುಕೊಂಡಿದ್ದೀರಾ?
**ಉತ್ತರ:** ನನಗೆ Fundamentals ಕಲಿಬೇಕು. ನನಗೆ ಒಂದು ಆರ್ಟ್ ಕಾಲೇಜ್ ಗೆ ಹೋಗಿ fundamentals ಕಲೀಬೇಕು. ಗುರುಗಳ ಹತ್ತಿರ ಕಲಿತಿದ್ದೇನೆ. ಆದ್ರೆ basic art education ಅಂತ ಇಲ್ಲ ನನಗೆ. ಅದಕ್ಕೆ ನನಗೆ ಅದನ್ನು ಕಲಿಬೇಕು ಅಂತ ಇದೆ.
**ಪ್ರಶ್ನೆ:** ಚಿತ್ರಕಲೆಯಲ್ಲಿ ನಿಮ್ಮ ಗುರಿ(goal) ಏನು?
ಉತರ: ಒಂದು goal ಇದೆ. ಪ್ರಪಂಚ ನನ್ನನ್ನು ಗುರುತಿಸುವಂತಹ ಒಂದು ಪೆಯಿಂಟಿಂಗ್ ಮಾಡಬೇಕು. ಅದನ್ನ ಮಾಸ್ಟರ್ ಪೀಸ್ ಅಂತಾರೆ. ಪ್ರತಿಯೊಬ್ಬ ಆರ್ಟಿಸ್ಟ್ ಗೂ ಆ ಒಂದು ಕನಸು, ಗುರಿ ಇರುತ್ತೆ.
**ಪ್ರಶ್ನೆ:** ನಮ್ಮ ಕನ್ನಡ ಕ್ಲಾಸ್ ಮಕ್ಕಳಿಗೆ ಆರ್ಟ್ ಬಗ್ಗೆ ಏನು ಹೇಳೋಕೆ ಇಷ್ಟ ಪಡುತೀರ?
**ಉತ್ತರ**: ಆರ್ಟ್ ನ್ನು ಒಂದು ಸಬ್ಜೆಕ್ಟ್ ಅಂತ ಕಲಿಬೇಡಿ. ಮ್ಯಾತ್, ಸಯನ್ಸ್ ಗಾಗಿ ಆರ್ಟ್ ಕಲಿಬೇಡಿ. ಆರ್ಟ್ ನ ಪ್ಯಾಶನ್ ಗಾಗಿ ಮಾಡಿ. ಆರ್ಟ್ ನ ಎಂಜಾಯ್ ಮಾಡಿ. ನಮ್ಮ ಮನಸ್ಸಿನ ಒತ್ತಡ (stress) ಜಾಸ್ತಿ ಆದಾಗ ಆರ್ಟ್ ನಿಂದ ಆ ಒತ್ತಡವನ್ನು ಕಡಿಮೆ ಮಾಡಿಕೊಳ್ಳಬಹುದು. ಉದಾಹರಣೆಗೆ ಕಾರ್ engine ಗೆ ಹೇಗೆ coolant ಅಗತ್ಯವೋ, ಹಾಗೆ ನಮ್ಮ ಸಿಸ್ಟಮ್ ಗೆ(brain) ಆರ್ಟ್ ಅಗತ್ಯ. ನಿಮ್ಮನ್ನು ಆರ್ಟ್ ನಲ್ಲಿ ಖುಷಿಯಿಂದ ತೊಡಗಿಸಿಕೊಳ್ಳಿ, ನೀವು ನಿಮ್ಮ ಗುರಿಯನ್ನು ತಲುಪುತ್ತೀರಿ.



## ನನ್ನ ಫ್ಲೈಟ್ ಬೆಂಗಳೂರಿಗೆ : ಸಿಹಿ ವೀರ

ಇಲ್ಲಿಂದ ಬೆಂಗಳೂರಿಗೆ ಇಪ್ಪತ್ನಾಲ್ಕು ಘಂಟೆ ಫ್ಲೈಟ್. ನಾನು ಬೆಂಗಳೂರಿನಲ್ಲಿ ಕುದುರೆ ರೈಡಿಂಗ್ ಮಾಡಿದೆ. ನಾವು ಫೇಮಸ್ ಗುರೂಜಿ ಮೀಟ್ ಮಾಡಿದ್ವಿ. ನಾನು ಎರಡೂ ಕೈ ಗೆ ಮೆಹೆಂದಿ ಹಾಕಿಸಿಕೊಂಡೆ. ನಾನು ನಾಲ್ಕು ಮೂವಿ ನೋಡಿದೆ. ನಾನು ನೋಡಿದ ನಾಲ್ಕು ಮೂವಿ ಇಂಕ್ರೆಡಿಬಲ್ಸ್, ಪೀಟರ್ ರಾಬಿಟ್(ಮೊಲ), ಜುರ್ರ್ಯಾಸಿಕ್ ಮತ್ತೆ ಪ್ರಿನ್ಸೆಸ್ ಡೈರಿಸ್ 2. ಪೀಟರ್ ಮೊಲ ನೋಡಿ ತುಂಬಾ ಸಂತೋಷ ಆಯಿತು. ಜುರ್ರ್ಯಾಸಿಕ್ ಸ್ವಲ್ಪ ಭಯ ಇತ್ತು. ಇಂಕ್ರೆಡಿಬಲ್ಸ್ 2 ತುಂಬಾ ಚೆನ್ನಾಗಿದೆ. ನಾನು ತುಂಬಾ ಮಜಾ ಮಾಡಿದೆ ನನ್ನ ಕಸಿನ್ಸ್ ಜೊತೆ. ನಾನು ಒಂದು ಹುಟ್ಟು ಹಬ್ಬದ ಪಾರ್ಟಿಲಿ ಡಿ.ವಿ. ಸದಾನಂದ ಗೌಡ ಅವರನ್ನು ನೋಡಿದೆ. ನಾನು ಕಸಿನ್ಸ್ ಜೊತೆ ಕ್ರಿಕೆಟ್ ಆಟ ಆಡುತಾ ಇದ್ದೆ. ನಾನು ಎರಡು ಹೊಸ ಕನ್ನಡಕ ತಗೊಂಡು ಬಂದೆ. ಒಂದು ಕನ್ನಡಕ ಗುಲಾಬಿ ಮತ್ತೆ ನೀಲಿ ಬಣ್ಣ. ನನ್ನ ಇನ್ನೊಂದು ಕನ್ನಡಕ ನೀಲಿ ಮತ್ತೆ ಬಿಳಿ. ನಾನು ಅಲ್ಲಿ ಫೋಟೋ ಶೂಟ್ ಮಾಡಿದೆ. ನಾನು ರೆಸ್ಟೋರೆಂಟ್ ಹೋಗಿದ್ದೆ. ಅದರ ಹೆಸರು ಮೊಟ್ಟೆ ಫ್ಯಾಕ್ಟರಿ. ನಾನು ನನ್ನ ಕಸಿನ್ ಪ್ರಧಾನ್ ಹತ್ರ ಗಾಲ್ಫ್ ಪಾಠ ತಗೋತಾ ಇದ್ದೆ. ನಾನು ಅಲ್ಲಿ ಎರಡು ತೋಟ ವಿಸಿಟ್ ಮಾಡಿದೆ. ಒಂದು ನನ್ನ ಚಿಕ್ಕಮ್ಮನ ತೋಟ, ಇನ್ನೊಂದು ನನ್ನ ಮಾಮನ ತೋಟ.


ಮುತ್ತಜ್ಜಿ


ಮೆಹಂದಿ



ಬಾಲಗಂಗಾಧರ ಸ್ವಾಮೀಜಿ


ಕ್ರಿಕೆಟ್


ಕುದುರೆ ರೈಡಿಂಗ್



## ಚಿಣ್ಣರ ಚಿತ್ರ ಕಲೆ




ಪ್ರಮಿತಿ ಉಪಾಧ್ಯ



ಸಿಹಿ ವೀರ




ಅದಿತ್ ಕುಮಾರ್




ಪ್ರೇರಣ ಗೌಡ

ಸಂಚಿಕೆ ಲ
ಆಗಸ್ಟ್ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್



## ನಾ ಓದಿದ ಕಥೆ : ಅದಿತ್ ಕುಮಾರ್

ಒಂದು ದಿನ ಒಂದು ಮೊಲ ಮತ್ತು ಒಂದು ಆಮೆ ಓಟದ ಪಂದ್ಯ ಓಡಬೇಕೆಂದು ನಿರ್ಧರಿಸಿದವು. ಮೊಲ ಮೊದಲಿಗೆ ಅತ್ಯಂತ ವೇಗವಾಗಿ ಓಡಿತು , ಸ್ವಲ್ಪ ಸಮಯದಲ್ಲೇ ಆಮೆ ಬಹಳಷ್ಟು ಹಿಂದೆ ಬಿದ್ದು ಬಿಟ್ಟಿತು. ತಾನು ಪಂದ್ಯ ಗೆಲ್ಲುವುದು ಖಂಡಿತ, ಆಮೆ ಬರುವವರೆಗೆ ಸ್ವಲ್ಪ ನಿದ್ರೆ ಮಾಡುತ್ತೇನೆ ಎಂದು ಕೊಂಡು ಮೊಲ ಮರದ ಕೆಳಗೆ ಹುಲ್ಲಿನ ಮೇಲೆ ಮಲಗಿ ಬಿಟ್ಟಿತು. ಆದರೆ ಅದಕ್ಕೆ ಜೋರಾಗಿ ನಿದ್ರೆ ಬಂದು ಬಿಟ್ಟಿತು. ಆಮೆ ನಿಧಾನವಾಗಿ ನಡೆಯುತ್ತಾ ಹೋಯಿತು ಮತ್ತು ಮೊಲವನ್ನು ದಾಟಿ ಮುಂದೆ ಹೋಗಿ ಬಿಟ್ಟಿತು. ಮೊಲ ನಿದ್ರೆಯಿಂದ ಎದ್ದಾಗ ಆಮೆ ಆಗಲೇ ಗುರಿಯನ್ನು ಮುಟ್ಟಿರುವುದನ್ನುನೋಡಿ ತಲೆ ತಗ್ಗಿಸಿತು .

ನೀತಿ : "ನಿಧಾನ ಮತ್ತು ನಿಶ್ಚಲತೆ ಗೆಲ್ಲುತ್ತದೆ "



## ಆಗಸ್ಟ್ ಮತ್ತು ಸೆಪ್ಟೆಂಬರ್ ನಲ್ಲಿ ಜನಿಸಿದ ಪ್ರಸಿದ್ಧ ಕನ್ನಡಿಗರು : ನಮಿತ ಪಂಡಿತ್

ಅರ್ಜುನ್ ಸರ್ಜಾ - 15-ಆಗಸ್ಟ್ -1964
ಎನ್.ಆರ್.ನಾರಾಯಣ ಮೂರ್ತಿ - 20-ಆಗಸ್ಟ್ -1946
ಸುಧಾ ಮೂರ್ತಿ - 19-ಆಗಸ್ಟ್ 1950
ಎಸ್.ಎಲ್.ಭೈರಪ್ಪ - 20-ಆಗಸ್ಟ್ -1931
ರಾಘವೇಂದ್ರ ರಾಜ್ಕುಮಾರ್ - 15-ಆಗಸ್ಟ್ -1965
ಮಾಲಾಶ್ರಿ - 10-ಆಗಸ್ಟ್ -1973
ಸುಧಾ ರಾಣಿ - 05-ಆಗಸ್ಟ್ -1974
ಸಿದ್ದರಾಮಯ್ಯ - 12-ಆಗಸ್ಟ್ -1948
ಜಿ.ವೆಂಕಟಸುಬ್ಬಯ್ಯ - 23-ಆಗಸ್ಟ್ -1913
ರಾಮಕೃಷ್ಣ ಹೆಗ್ಡೆ - 29-ಆಗಸ್ಟ್ -1926

- ಸರ್ ಮೋಕ್ಷಗುಂಡಮ್ ವಿಶ್ವೇಶ್ವರಯ್ಯ - 15 ಸೆಪ್ಟೆಂಬರ್ -1860
- ಅನಂತ್ ನಾಗ್ - 04- ಸೆಪ್ಟೆಂಬರ್ -1948
- ವಿಷ್ಣುವರ್ಧನ - 18 ಸೆಪ್ಟೆಂಬರ್ 1950
- ರಮೇಶ್ ಅರವಿಂದ್ - 10 ಸೆಪ್ಟೆಂಬರ್ -1964
- ಸುದೀಪ್ - 02 ಸೆಪ್ಟಂಬರ್ 1973
- C.R. ರಾವ್ - 10-ಸೆಪ್ಟೆಂಬರ್-1920
- ಎನ್.ವೈ. ಹನುಮಂತಪ್ಪ - 25 ಸೆಪ್ಟೆಂಬರ್ - 1939
- ಅಶ್ವಿನಿ ಪೊನ್ನಪ್ಪ - 18 ಸೆಪ್ಟೆಂಬರ್ 1989
- ಕ್ಲೇರ್ ವೀಕ್ಸ್ - 14 ಸೆಪ್ಟೆಂಬರ್ -1911
- ಅನಂತ್ ಪೈ - 17- ಸೆಪ್ಟೆಂಬರ್ -1929

ಸಂಚಿಕೆ ೭
ಜುಲೈ 2018

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್

## ನಾ ಕಂಡ ಸಿನಿಮಾ "ಆಪ್ತಮಿತ್ರ" : ಪ್ರಕೃತಿ ಉಪಾಧ್ಯ






ನೀವು ಆಪ್ತಮಿತ್ರ ಸಿನೆಮಾ ನೋಡಿದ್ದೀರಾ? ಈ ಸಿನಿಮಾದಲ್ಲಿ ರಮೇಶ್ ಮತ್ತು ಗಂಗಾ (ಸೌಂದರ್ಯ) ಬೇರೆ ಊರಿಗೆ ಬಂದು ದೊಡ್ಡ ಬಂಗಲೆ ತಗೊಳ್ಳೋಕೆ ನಿರ್ಧಾರ ಮಾಡುತ್ತಾರೆ. ಎಲ್ಲರೂ ಆ ಮನೆ ಭೂತದ ಬಂಗಲೆ, ಅದನ್ನು ತಗೋಬೇಡಿ ಅಂತ ಹೆದರಿಸುತ್ತಾರೆ. ಆದರೂ ರಮೇಶ್ ಮತ್ತು ಗಂಗಾ ಆ ಬಂಗಲೆಯನ್ನು ತಗೋತಾರೆ. ಆ ಮನೆಯಲ್ಲಿ ಮಹಡಿಯ ಮೇಲೆ ಒಂದು ರೂಮ್ ಇದೆ. ಅದರೊಳಗೆ ಯಾರೂ ಹೋಗಬಾರದು ಎಂದು ಅದಕ್ಕೆ ಬೀಗ ಹಾಕಿರುತ್ತಾರೆ. ಮನೆ ತಗೊಂಡ ಮೇಲೆ ಗಂಗಾ ಮತ್ತು ವಾಚ್ ಮ್ಯಾನ್ ಮಗಳು ಸೌಮ್ಯ(ಪ್ರೇಮ) ಕೀ ಮಾಡಿಸಿಕೊಂಡು ಬಾಗಿಲು ತೆಗೆದು ಒಳಗೆ ಹೋಗುತ್ತಾರೆ. ಒಳಗಡೆ ನಾಗವಲ್ಲಿಯ ಆಭರಣಗಳನ್ನು ಮತ್ತು ಭರತನಾಟ್ಯ ಬಟ್ಟೆಗಳನ್ನು ನೋಡುತ್ತಾರೆ. ಅಂದಿನಿಂದ ಮನೆಯ ಸುತ್ತಮುತ್ತ ವಿಚಿತ್ರವಾದ ಘಟನೆಗಳು ನಡೆಯಲು ಶುರುವಾಯಿತು. ಅದೇ ಸಮಯಕ್ಕೆ ರಮೇಶನ ಗೆಳೆಯ ಹೆಸರಾಂತ ಮನೋವಿಜ್ಞಾನಿ ವಿಷ್ಣು(ವಿಷ್ಣುವರ್ಧನ್) ಅಲ್ಲಿಗೆ ಬರುತ್ತಾನೆ. ಮನೆಯಲ್ಲಿ ನಡೆಯುವ ಈ ವಿಚಿತ್ರ ಘಟನೆಗಳಿಗೆ ಸೌಮ್ಯಳೆ ಕಾರಣ ಅಂತ ಎಲ್ಲರೂ ಅಂದುಕೊಳ್ಳುತ್ತಾರೆ. ಅದನ್ನು ಸರಿಪಡಿಸಲು ಮಂತ್ರವಾದಿಯನ್ನು(ಅವಿನಾಶ್) ಕರೆಸುತ್ತಾರೆ. ಮನೆಯಲ್ಲಿ ನಡೆಯುವ ವಿಚಿತ್ರ ಘಟನೆಗಳು, ಅದಕ್ಕೆ ಕಾರಣ ಯಾರು ಮತ್ತು ಈ ಸಮಸ್ಯೆಗಳಿಂದ ಅವರು ಹೇಗೆ ಹೊರಬರುತ್ತಾರೆ ಎಂದು ತಿಳಿಯಲು ನೋಡಿ ಆಪ್ತಮಿತ್ರ ಕನ್ನಡ ಸಿನೆಮಾ.

## ನುಡಿಮುತ್ತು :

೧. ಪ್ರಯತ್ನ ಎಂಬುದು ಸಣ್ಣ ಪದವಾಗಿರಬಹುದು. ಆದರೆ ಅದು ತರುವ ಪರಿಣಾಮ ಮಾತ್ರ ಅಗಾಧ. ಎಂಥ ಸೋಲನ್ನಾದರೂ ಗೆಲ್ಲುವಂತೆ ಮಾಡುವ ಶಕ್ತಿ ಅದಕ್ಕಿದೆ. ಪ್ರಯತ್ನವೊಂದೇ ನಮ್ಮನ್ನು ಜೀವನ್ಮುಖಿಯಾಗಿಡುವುದು

೨.ಬಂದೊದಗುವ ಎಂಥ ಜಟಿಲ ಸನ್ನಿವೇಶವನ್ನೂ ಮೆಟ್ಟಿ ನಿಂತೆ ಎಂದಾದರೆ, ಭವಿಷ್ಯದಲ್ಲಿ ಯಾವುದೇ ದುರ್ಗಮ ಪರಿಸ್ಥಿತಿಯನ್ನೂ ನೀನು ಯಶಸ್ವಿಯಾಗಿ ಖಂಡಿತವಾಗಿಯೂ ಎದುರಿಸಬಲ್ಲೆ.

## ಜೋಕ್ಸ್ : ಪ್ರಮಿತಿ ಉಪಾಧ್ಯ

**ಪಾಂಡು ತಲೆ ಜೊತೆಗೆ ಭುಜಕ್ಕೂ ಶಾಂಪೂ ಹಾಕ್ತಿದ್ದ.**

**ಹೆಂಡ್ತಿ** : ಅಯ್ಯೋ..... ಶಾಂಪೂ ನ ತಲೆಗೆ ಹಾಕೋದು ಬಿಟ್ಟು ಭುಜಕ್ಕೆ ಹಾಕ್ತಿದೀರಾ?

**ಪಾಂಡು**:ಪ್ರಿಯೆ ಇದು ಸಾಮಾನ್ಯ ಶಾಂಪೂ ಅಲ್ಲ ಕಣೇ ... ಇದು **Head & Shoulder.** 😀

**ಸುಭಾಷಿತ :** ಮನುಷ್ಯನ ದಬ್ಬಾಳಿಕೆಗೆ ಹೆದರಿ ಸತ್ಯವನ್ನೆಂದಿಗೂ ಅವಮಾನಿಸಬೇಡ.
- ರವೀಂದ್ರನಾಥ ಟಾಗೋರ್

.

## ಮಂಕುತಿಮ್ಮನ ಕಗ್ಗ

ಬದುಕಿಗಾರ್ ನಾಯಕರು, ಏಕನೋ ಅನೇಕರೋ?
ವಿಧಿಯೋ ಪೌರುಷವೋ ಧರುಮವೋ
ಅಂಧಬಲವೋ?
ಕುದುರುವುದೆಂತು ಈಯವ್ಯವಸ್ಥೆಯ ಪಾಡು?
ಅದಿಗುದಿಯೆ ಗತಿಯೇನೋ? – ಮಂಕುತಿಮ್ಮ ||೭||

ಕ್ರಮವೊಂದು ಲಕ್ಷ್ಯವೊಂದುಂಟೇನು ಸೃಷ್ಟಿಯಲಿ?
ಭ್ರಮಿಪುದೇನಾಗಾಗ ಕರ್ತೃವಿನ ಮನಸು?
ಮಮತೆಯುಳ್ಳವನಾತನಾದೊಡೀ ಜೀವಗಳು
ಶ್ರಮಪಡುವುದೇಕಿಂತು -ಮಂಕುತಿಮ್ಮ ? ||೮||


## ಪದ ಹುಡುಕೋಣ – ಸಾಹಿತ್ಯ

| | | | | | | | | | | | |
|---|---|---|---|---|---|---|---|---|---|---|---|
| ಮ | ಲೇ | ಖ | ನಿ | ಬ | ರಿ | ಕು | ಚಿ | ಕ | ವಿ | ಯ | ತ್ರಿ |
| ಮಾ | ಓ | ಯ | ಕ | ವಿ | ನಿ | ಕಾ | ದಂ | ಬ | ರಿ | ಕಾ | ರ |
| ರಾ | ದ | ಯ | ಮಾ | ಟ | ಲು | ನ್ನ | ವೆ | ನೊ | ಮಾ | ತಾ | ಡು |
| ಯ | ಕಾ | ವ್ಯ | ಚಂ | ಪ್ರ | ಬಂ | ಧ | ಟ | ವಿ | ಮ | ರ್ಶ | ಕ |
| ದ | ಗ | ಲಿ | ಮ | ಲ್ಲಿ | ಗೆ | ಕೃ | ತಿ | ಕಾ | ರ | ಕೃ | ತಿ |
| ಸಂ | ಗೀ | ತ | ಲೇ | ಖ | ನ | ಚ | ತ್ರೀ | ಸ್ | ಘ | ಡ | ದ |
| ಖ | ಕ | ತೆ | ಗಾ | ರ | ನೇ | ಹ | ಲ | ವಿ | ರ | ಹ | ಸ್ಯ |
| ಚಿ | ತಾ | ದಂ | ತ | ಫ | ಲೇ | ಖ | ಕ | ಮ | ಋ | ಗ | ದ್ಯ |
| ಕ | ರಿ | ನಾ | ಲೇ | ಖ | ಣಿ | ನೀ | ರು | ರ್ಶೆ | ಸಿ | ಗೀ | ರಿ |
| ಯಾ | ಲೇ | ಟ | ಕಾ | ಕ | ಗು | ಲಾ | ಬಿ | ನಾ | ಮೋ | ಗ್ರಂ | ಥ |
| ಬಾ | ಖ | ಕ | ಲಿ | ವ | ಏ | ಕಾ | ತ | ಟ | ಮ್ಮ | ದಂ | ಗ |
| ಣು | ಕಿ | ಮೂ | ರು | ನ | ಜ | ದಂ | ಡೆ | ಕ | ನೈ | ದಿ | ಲೆ |
| ತ್ರಿ | ವೇ | ಣಿ | ಪ | ನೋ | ಟ | ಬ | ಪು | ಕಾ | ಸ್ತ | ಕ | ಖ |
| ಸಂ | ಸ್ಕಾ | ರ | ದ್ಯ | ಆ | ನೆ | ರಿ | ಏ | ರ | ಒ | ಲೆ | ಥೆ |


| | | | |
|---|---|---|---|
| ಲೇಖನ | ಕಾವ್ಯ | ಗದ್ಯ | ಲೇಖಕಿ |
| ಪ್ರಬಂಧ | ಲೇಖಕ | ಕವಿ | ಕಾದಂಬರಿ |
| ವಿಮರ್ಶಕ | ಕೃತಿಕಾರ | ಕವಿಯತ್ರಿ | ಕಥೆ |
| ನಾಟಕಕಾರ | ಗ್ರಂಥ | ಪದ್ಯ | ವಿಮರ್ಶೆ |
| ಕತೆಗಾರ | ನಾಟಕ | ಕವನ | ಕಾದಂಬರಿಕಾರ |

ಕೃಪೆ : ಮಕ್ಕಳ ಪುಟ ಪತ್ರಿಕೆ – ವಿ. ಪ್ರಜಾ

## ಚಿತ್ರ ಶೀರ್ಷಿಕೆ : ರಜನೀ ಮಹೇಶ್



ಪಾತರಗಿತ್ತೀ ಪಕ್ಕಾ...ನೋಡಿದ್ಯೇನ ಅಕ್ಕಾ ...!



## ಫೆಸ್ಟಿವಲ್ ಆಫ್ ಇಂಡಿಯಾ - 2018: ಆರುಶ್ ಯೆಲಿಮೆಲಿ

**ಫೆಸ್ಟಿವಲ್ ಆಫ್ ಇಂಡಿಯಾ !!**

24ನೇ ಫೆಸ್ಟಿವಲ್ ಆಫ್ ಇಂಡಿಯಾ ಆಗಸ್ಟ್ ತಿಂಗಳ 11 ಹಾಗು 12 ನೇ ತಾರೀಕು ಶಾರ್ಲೆಟ್ ಡೌನ್ ಟೌನ್ ನಲ್ಲಿ ನಡೆಯಿತು. ಇಂಡಿಯಾ ಅಸೋಸಿಯೇಷನ್ ಆಫ್ ಶಾರ್ಲೆಟ್ (IAC) 1994 ರಲ್ಲಿ ಚಿಕ್ಕ ಗುಂಪಿನೊಂದಿಗೆ ಶುರು ಆಯಿತು. ಇಂದು 20ಸಾವಿರಕ್ಕೂ ಹೆಚ್ಚು ಜನ ಭಾಗವಹಿಸುತ್ತಾರೆ, ಸಾಹಿತ್ಯ , ಸಂಗೀತ, ಕಲೆ, ಸಂಸ್ಕೃತಿ, ಆಚಾರ ವಿಚಾರ, ಆಹಾರ, ವ್ಯವಹಾರ ಹಾಗು ಇನ್ನೂ ಬಹಳಷ್ಟು ವಿಷಯಗಳ ಸುತ್ತ ಆಯೋಜಿಸಲ್ಪಡುತ್ತದೆ. ನಾನು ಮತ್ತು ನನ್ನ ಗೆಳೆಯರು ಪ್ರತಿ ವರ್ಷದಂತೆ ಈ ವರ್ಷವೂ ಗ್ರೂಪ್ ಡಾನ್ಸ್ ಮಾಡಿದೆವು . ಇದಕ್ಕೆ ಮುಂಚೆ ನಾವೆಲ್ಲ ಡಾನ್ಸ್ ಪ್ರಾಕ್ಟೀಸ್ಗಾಗಿ ಪ್ರತಿ ವಾರಸಿಕ್ಕಾಗ ಒಂದು ಚಿಕ್ಕ ಪ್ಲೇ ಡೇಟ್ ಮಾಡುತ್ತಿದ್ದೆವು. ನಮಗೆಲ್ಲ ಅದೇ ಖುಷಿ . ಇನ್ನೊಂದು ಇಂಟೆರೆಸ್ಟಿಂಗ್ ವಿಷಯ ಎಂದರೆ ನಮ್ಮ ಡ್ಯಾನ್ಸಿಗೆ ಮುಂಚೆ ಶಾರ್ಲೆಟ್ ಸಿಟಿಯ ಮೇಯರ್ Vi Lyles ಅವರನ್ನು ಪರಿಚಯ ಮಾಡಿಕೊಂಡೆವು. ಮಸಾಲೆ ದೋಸೆ ತಿಂದೆವು ಹಾಗೆ ನಮ್ಮ ಅಕ್ಕ ಮತ್ತು ಅವಳ ಫ್ರೆಂಡ್ಸ್ ಡಾನ್ಸ್ ಮತ್ತು ಇನ್ನ ತುಂಬಾ ಡಾನ್ಸ್ performances ನೋಡಿದೆವು. ಮುಂದಿನ ವರ್ಷ ನಾನು ಮತ್ತು ನನ್ನ ಫ್ರೆಂಡ್ಸ್ 10 ವರ್ಷದವರು ಆಗಿರುತ್ತೇವೆ, ಆದ್ದರಿಂದ Belk Theater ಒಳಗೆ ಡಾನ್ಸ್ ಮಾಡುತ್ತೇವೆ, ನೀವೂ ಬಂದು ನೋಡಿ.








**ಓದುಗರ ವಿಮರ್ಶೆ:**

೧. “ಚಿಗುರು ಚಿಲಿಪಿಲಿ” ಮಾಸಪತ್ರಿಕೆ ಒಂದು ವಿಶೇಷವಾದ ಪ್ರಯತ್ನ. ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ. ರಜನಿ, ನಿಮ್ಮ ಈ ಪ್ರಾಮಾಣಿಕ ಪ್ರಯತ್ನಕ್ಕೆ ನನ್ನ ನಮನ. ಅದರಲ್ಲೂ ಜೂನ್ ತಿಂಗಳ ಸಂಚಿಕೆಯಂತೂ ವಿಶಿಷ್ಟವಾಗಿದೆ. ಶ್ರೀಯುತ ಬಿದರಹಳ್ಳಿ ನರಸಿಂಹಮೂರ್ತಿ ಯವರನ್ನು ನಮ್ಮೆಲ್ಲರಿಗೆ ಪರಿಚಯ ಮಾಡಿಸಿದ್ದೀರ. ಅದಕ್ಕೆ ಧನ್ಯವಾದಗಳು ರಜನಿ. ಶ್ರೀಯುತರ ಪರಿಚಯದ ಲೇಖನ ಸೊಗಸಾಗಿತ್ತು. ಇನ್ನು ಅವರು ಮಕ್ಕಳ ಪ್ರೋತ್ಸಾಹಕ್ಕಾಗಿ ಅಂಕಣ ಬರೆಯುತ್ತಿದ್ದಾರೆ ಎಂದು ತಿಳಿದು ತುಂಬಾ ಸಂತೋಷವಾಗುತ್ತಿದೆ. ಇದೆ ರೀತಿ ಮಕ್ಕಳು ಉತ್ಸಾಹದಿಂದ ಬರೆದು ಈ ಪತ್ರಿಕೆಯನ್ನು ಇನ್ನೂ ಉನ್ನತ ಮಟ್ಟದಲ್ಲಿ ಬೆಳೆಸಲಿ ಎಂದು ಆಶಿಸುತ್ತೇನೆ. --- **ಇಂದಿರಾ ನಾಗೇಶ್**

೨. ಶ್ರೀ ಸದಾಶಿವ ಭಟ್ಟರ ಬಗ್ಗೆ ತಿಳಿಸಿಕೊಟ್ಟಿದಕ್ಕೆ ತುಂಬಾ ಥ್ಯಾಂಕ್ಸ್. ಅವರ ಬಗ್ಗೆ ಬರೆದ ಆರ್ಟಿಕಲ್ ತುಂಬಾ ಇಷ್ಟ ಆಯಿತು. - **ಶ್ವೇತ ಮಹೇಶ್**

೩. **ಮೂರ್ತಿ ತಾತ**, ನಮ್ಮ ಮಾಸಪತ್ರಿಕೆಯಲ್ಲಿ ನೀವು ಬರೆಯುತ್ತಿರುವುದು ನೋಡಿ ನನಗೆ ತುಂಬಾ ಖುಷಿ ಆಯಿತು.ನೀವು ಹೇಳುವ ಕಥೆ ಕೇಳಲಿಕ್ಕೆ ನನಗೆ ತುಂಬಾ ಇಷ್ಟ. ಹಾಗೆಯೇ ಈ ಸಂಚಿಕೆಯ ರವಿ ಸರ್ ಅವರ ಪರಿಚಯವನ್ನು ಕನ್ನಡಕ್ಕೆ ಅನುವಾದ ಮಾಡಿ ಕೊಟ್ಟಿದ್ದಕ್ಕೆ ತುಂಬಾ ಥ್ಯಾಂಕ್ಸ್. ಮುಂದಿನ ತಿಂಗಳ ಪತ್ರಕ್ಕೆ ಕಾಯುತ್ತಿರುತ್ತೇನೆ. – **ಪ್ರಕೃತಿ**



## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

**ಪತ್ರ ೨**

ಪ್ರೀತಿಯ ಪುಟಾಣಿಗಳೆ,

ಕಾಳಿದಾಸನ ಹೆಸರು ಕೇಳಿದೀರಾ?

೪-೫ ನೆ ಶತಮಾನದ ಭಾರತಲ್ಲಿದ್ದ ಸಂಸ್ಕೃತ ನಾಟಕಕಾರ ಮಹಾಕವಿ. ಹಿಮಾಲಯದ ಕೇದಾರ ಘಾಟಿಯ ಕಾಳಿಮಠದ ಬಳಿ ಜನಿಸಿದವ ಎನ್ನಲಾಗಿದೆ. ಬೇಂದ್ರೆಯವರು ಕನ್ನಡಿಸಿರುವ ಅವನ ಮೇಘದೂತ ಕಾವ್ಯ ಮೂಲ ಸಂಸ್ಕೃತ ಕಾವ್ಯದಷ್ಟೇ ರಸವತ್ತಾಗಿದೆ. ಸುಕೋಮಲ ಬಾಲೆ ಶಕುಂತಲಾ ಕುರಿತ ಅವನ ನಾಟಕ ಅಭಿಜ್ಞಾನಶಾಕುಂತಲಂ ವಿಶ್ವವಿಖ್ಯಾತ ಕಲಾಕೃತಿ. ಅವಳ ಕಥೆ ಗೊತ್ತಾ? ಇನ್ನೂ ಹಸುಗೂಸಿದ್ದಾಗಲೆ ಅವಳನ್ನು ಕಾಡಿನಲ್ಲಿ ಬಿಟ್ಟು ಹೋದರು ಅಪ್ಪ ವಿಶ್ವಾಮಿತ್ರ ಋಷಿ, ಅಪ್ಸರೆ ಅಮ್ಮ ಮೇನಕೆ. ಆ ಕೂಸನ್ನು ಶಕುಂತ ಪಕ್ಷಿಗಳು ಕಾಪಾಡಿದ್ದರಿಂದ ಅವಳಿಗೆ ಆ ಹೆಸರು ಬಂತು. ಕಣ್ವಋಷಿಗಳ ಸಾಕುಮಗಳಾಗಿ ಅನಸೂಯೆ ಪ್ರಿಯಂವದೆಯರ ಜೀವಸಖಿಯಾಗಿ ಆಶ್ರಮದಲ್ಲಿ ಬೆಳೆದಳು. ಬೇಟೆಗೆಂದು ಕಾಡಿಗೆ ಬಂದಿದ್ದ ದೊರೆ ದುಷ್ಯಂತ ಅವಳ ತಾರುಣ್ಯಕ್ಕೆ ಸೌಂದರ್ಯ ಕ್ಕೆ ಮೋಹಿತನಾಗಿ ಗುಟ್ಟಾಗಿ ಗಾಂಧರ್ವ ರೀತಿ ವಿವಾಹವಾದ. ಶೀಘ್ರದಲ್ಲೇ ಹಸ್ತಿನಾಪುರಕ್ಕೆ ಕರೆಸಿಕೊಳ್ಳುವುದಾಗಿ ಹೇಳಿ ತನ್ನ ಗುರುತಿನ ಮುದ್ರೆಯುಂಗುರ ಕೊಟ್ಟು ಅವಳನ್ನಲ್ಲೆ ಬಿಟ್ಟು ಹೋದ. ಅವನ ನೆನೆಪಿನಲ್ಲೆ ಮೈಮರೆತು ಕೂತವಳ ಕಂಡು ಶೀಘ್ರಕೋಪಿ ದೂರ್ವಾಸಮುನಿ ತನ್ನನ್ನು ಸತ್ಕರಿಸಲಿಲ್ಲ ಎಂದು ಶಪಿಸಿದ. ಪರಿಣಾಮವಾಗಿ ದುಷ್ಯಂತ ಅವಳನ್ನು ಮರೆತೇ ಬಿಟ್ಟ. ಗರ್ಭಿಣಿಯಾದ ಶಕುಂತಲೆಯನ್ನು ಕಣ್ವ ಋಷಿಗಳು, ತಾಪಸಿ ಗೌತಮಿ ಮತ್ತು ಶಿಷ್ಯರ ಸಂಗಡ ದೊರೆಯ ಅರಮನೆಗೆ ಕಳಿಸಿಕೊಟ್ಟರು. ಬೀಳ್ಕೊಡುವಾಗ ಕರುಣಾರ್ದ್ರಳಾದ ಶಕುಂತಲೆ ಸಖಿಯರನ್ನು ಆಶ್ರಮದ ಮರಗಿಡಬಳ್ಳಿಗಳನ್ನು, ಜಿಂಕೆ ಮೊಲಗಳನ್ನು ತಬ್ಬಿ ಉತ್ಕಂಠಿತಳಾದ ಸನ್ನಿವೇಶ ಇಡಿ ವಿಶ್ವ ಸಾಹಿತ್ಯದಲ್ಲೇ ಜೀವಕಾರುಣ್ಯದ ಮೇರುಶಿಖರ. (ಕಾವ್ಯೇಷು ನಾಟಕಂರಮ್ಯಂ ತತ್ರರಮ್ಯಾ ಶಕುಂತಲಾ । ತತ್ರಾಪಿಚ ಚತುರ್ಥೋಂಕಃ ತತ್ರ ಶ್ಲೋಕಚತುಷ್ಟಯಂ ॥ ಎಂಬ ಮೆಚ್ಚು ನುಡಿ ಈ ನಾಟಕದ ನಾಕನೆ ಅಂಕದಲ್ಲಿ ಕಣ್ವರು ತಮ್ಮನ್ನ, ಗಿಡಮರಬಳ್ಳಿಗಳನ್ನ, ದೊರೆಯನ್ನ ಹಾಗು ಶಕುಂತಲೆಯನ್ನುದ್ದೇಶಿಸಿ ಹೇಳುವ ೬,೧೮,೧೯,೨೨ ನೆ ಮಾರ್ಮಿಕ ಶ್ಲೋಕಗಳನ್ನು ಕುರಿತದ್ದು). ದೋಣಿ ದಾಟುತ್ತ ನೀರಲ್ಲಾಡುತ್ತಿದ್ದ ಅವಳ ಬೆರಳಿನಿಂದ ಗುರುತಿನುಂಗುರ ದೂರದೃಷ್ಟದಿಂದ ಕಳಚಿ ನೀರಿನಾಳಕ್ಕೆ ಬಿದ್ದುದು ಅವಳರಿವಿಗೇ ಬರಲಿಲ್ಲ. ಮೀನೊಂದು ಅದನ್ನು ನುಂಗಿ ಬಿಟ್ಟಿತು. ಅರಮನೆಯಲ್ಲಿ ದುಷ್ಯಂತ ಅವಳ ಗುರುತು ಹಿಡಿಯದೆ ಹೀಯಾಳಿಸಿಬಿಟ್ಟ..



## ಪತ್ರಮಾಲೆ: ಶ್ರೀ ಬಿದರಹಳ್ಳಿ ನರಸಿಂಹಮೂರ್ತಿ

ಗೌತಮಿ ಮತ್ತು ವಟುಗಳು ಅವಳನ್ನಲ್ಲೆ ಬಿಟ್ಟು ನಡೆದರು. ಶಕುಂತಲೆ ಭೂಮಿ ಬಾಯ್ಬಿಡುವ ಹಾಗೆ ರೋದಿಸಿದಾಗ ತಾಯಿ ಮೇನಕೆ ಪ್ರತ್ಯಕ್ಷಳಾಗಿ ಮಗಳನ್ನು ಸ್ವರ್ಗಲೋಕಕ್ಕೆ ಕರೆದೊಯ್ದು ಮಾರೀಚಮುನಿ ಆಶ್ರಮದಲ್ಲಿರಿಸಿದಳು. ಅಲ್ಲಿ ಹುಟ್ಟಿದ ಅವಳ ಮಗ ಸರ್ವದಮನ. ಒಂದು ದಿನ ಬೆಸ್ತನೊಬ್ಬ ಆಸ್ಥಾನಕ್ಕೆ ಬಂದು ಮೀನ ಹೊಟ್ಟೆಯಲ್ಲಿ ಸಿಕ್ಕಿತೆಂದು ಮುದ್ರೆಯುಂಗುರ ಕೊಟ್ಟ. ನೆನಪಿನ ಕಾಣಿಕೆ ನೋಡುತಿದ್ದಂತೆ ಮರೆತದ್ದೆಲ್ಲ ನೆನೆಪಿಗೆ ಬರುತ್ತದೆಂಬ ದೂರ್ವಾಸನ ಉಶ್ಯಾಪದಂತೆ ದುಷ್ಯಂತನಿಗೆ ಶಕುಂತಲೆಯ ಸ್ಮರಣೆ(ಅಭಿಜ್ಞಾನ) ಉಂಟಾಯಿತು. ತುಂಬ ಗೋಳಾಡಿದ. ಹೆಂಡತಿಗಾಗಿ ಎಲ್ಲಕಡೆ ಹುಡುಕಾಡಿದ. ಎಲ್ಲೂ ಸಿಕ್ಕಲಿಲ್ಲ. ಮುಂದೆ ಇಂದ್ರನ ಕರೆಯಮೇರೆಗೆ ಸ್ವರ್ಗಲೋಕಕ್ಕೆ ಹೋದಾಗ ಆಶ್ರಮದಂಗಳದಲ್ಲಿ ಸಿಂಹದ ಮರಿಗಳೊಡನೆ ಆಡುತ್ತಿದ್ದ ಬಾಲಕನನ್ನು ಕಂಡು ದುಷ್ಯಂತ ಬೆರಗಾದ. ಆಗ ಸತಿಪತಿಯ ಪುನರ್ಮಿಲನವಾಯಿತು. ಸರ್ವದಮನ ಪಟ್ಟಾಭಿಷಿಕ್ತನಾಗಿ ಭರತ ಚಕ್ರವರ್ತಿ ಎನಿಸಿಕೊಂಡ. ಅವನಿಂದಲೇ ಭರತ ಖಂಡ ಎಂಬ ಹೆಸರು ಬಂದಿದ್ದು. ನಮ್ಮ ದೇಶ ಭಾರತ ಎಂದು ಜಗದ್ವಿಖ್ಯಾತವಾದದ್ದು. ಕಾಳಿದಾಸನ ಮೂಲನಾಟಕದಲ್ಲಿ ಮೇಲ್ವರ್ಗದ ಪಾತ್ರಗಳು ಸಂಸ್ಕೃತದಲ್ಲಿ ಸಂಭಾಷಿಸಿದರೆ ಕೆಳವರ್ಗದ ಪುರುಷ ಹಾಗೂ ಸ್ತ್ರೀಪಾತ್ರಗಳು ಆಗಿನ ಕಾಲದ ಜನಸಾಮಾನ್ಯರ ಭಾಷೆಯಾಗಿದ್ದ ಪ್ರಾಕೃತದಲ್ಲಿ ಮಾತಾಡುವುದು ಅಂದಿನ ಸಾಮಾಜಿಕ\ಸಾಂಸ್ಕೃತಿಕ ಕಟ್ಟಳೆಯನ್ನು ಸೂಚಿಸುವಂತೆ ಕಾಣುತ್ತದೆ. ಅಜ್ಜ (=ಆರ್ಯ\ಹಿರಿಯ\ಗೌರವಾನ್ವಿತ ), ಭಟ್ಟ(= ಭರ್ತಾ\ಸ್ವಾಮಿ\ಗಂಡ) ಇತ್ಯಾದಿ ಕನ್ನಡ ಶಬ್ದಗಳು ಈ ನಾಟಕದಲ್ಲಿ ಕಾಣಿಸಿಕೊಂಡಿರುವುದು ಕೌತುಕದ ಸಂಗತಿ. ಈ ನಾಟಕದ ಕಥೇನ ಕವಿಯ ಜೀವನದೊಳಗೆ ಹದವಾಗಿ ಸಮ್ಮಿಳಿತಗೊಳಿಸಿ ರೇಣುಕಾಶರ್ಮ ನಿರ್ದೇಶಿಸಿದ ಕನ್ನಡ ಚಿತ್ರ ಕವಿರತ್ನ ಕಾಳಿದಾಸ (೧೯೮೩) ಆ ಮಹಾಕವಿ ಮೇಲೆ ಬಂದಿರುವ ಚಿತ್ರಗಳಲ್ಲೆ ಅಮೋಘವಾದ್ದು. ರಾಜಕುಮಾರ್ - ಜಯಪ್ರದರ ಅಭಿನಯ ಅವಿಸ್ಮರಣೀಯ. ಮೂರು ಘಂಟೆ ಸಿನೆಮಾದಲ್ಲಿ ಬರಿ ಅರ್ಧಗಂಟೆ ಅವಧಿಯ ಅಭಿಜ್ಞಾನಶಾಕುಂತಲಂ ನಾಟಕಸಾರ ಚಿತ್ರಣ ಕಲಾತ್ಮಕ ಪವಾಡದಂತೆ ಕಂಗೊಳಿಸುತ್ತದೆ.

**ನಾಗರ ಪಂಚಮಿ * * * ನಿಮ್ಮ ಮೂರ್ತಿತಾತ.**

ಚಿಗುರು ಚಿಲಿ ಪಿಲಿ ...ಮಾಸ ಪತ್ರಿಕೆ
ಚಿಗುರು ಕನ್ನಡ ಪಾಠಶಾಲೆ - ಶಾರ್ಲೆಟ್





ಚಿಗುರು ಕನ್ನಡ ಪಾಠಶಾಲೆ -ಶಾರ್ಲೆಟ್
rajanisomayaji@gmail.com